**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ,**

**ರೋಣ**

ಸಿ.ಸಿ. ನಂ. 460/2019

ಸಿ.ಡಬ್ಲೂಃ 9 ಪಿ.ಡಬ್ಲೂಃ 2

| | |
|---|---|
| ಹೆಸರುಃ | ವಿಶ್ವನಾಥ |
| ತಂದೆಯ ಹೆಸರುಃ | ಶಿವಲಿಂಗ ಚೌಗಲೆ |
| ವಯಸ್ಸುಃ | 41 ವರ್ಷ |
| ಉದ್ಯೋಗಃ | ಪೊಲೀಸ ಇನ್ಸಪೆಕ್ಟರ ಸಿ.ಸಿ.ಬಿ ಹುಬ್ಬಳ್ಳಿ ಧಾರವಾಡ |
| ವಿಳಾಸಃ | ಹುಬ್ಬಳ್ಳಿ |

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 26-08-2022 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

**1.** ನಾನು ರೋಣ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ದಿಃ 17/09/2015 ರಿಂದ ದಿಃ 19/02/2018 ರವೆರೆಗೆ ಕರ್ತವ್ಯ ಮಾಡಿರುತ್ತೇನೆ. ದಿಃ 03/01/2018 ರಂದು ಈ ಪ್ರಕರಣದ ಕಡತವನ್ನು ಚಾಸಾ 8 ಎ. ಎಸ್. ಐ ರವರಿಂದ ಪಡೆದು , ಪರಿಶೀಲನೆ ಮಾಡಿ, ತನಿಖೆ ಮುಂದುವರೆಸಿರುತ್ತೇನೆ. ನಾನು ಅದೇ ದಿನ ರೋಣ ಸಬ್ ರಿಜಿಸ್ಟರ ರವರ ಕಚೇರಿಯಿಂದ ಸವಡಿ ಗ್ರಾಮದ ರಿ.ಸ. ನಂ.188/1 ಎ ಮತ್ತು 189/1 , 402/2 , 534/1+2 ಹಾಗೂ 396/3 ಎ/1 ಈ ಜಮೀನುಗಳಿಗೆ ಸಂಬಂಧಪಟ್ಟಂತೆ ಹಕ್ಕು ಬಿಟ್ಟು ಕೊಟ್ಟ ಪತ್ರ ಮತ್ತು ಹಕ್ಕು

ಪಡೆದುಕೊಂಡಂತಹ ಫೋಟೋ ಇರುವ ದಾಖಲಾತಿಯನ್ನು ಪಡೆದಿರುತ್ತೇನೆ. ದಿಃ 05/01/2018 ರಂದು ಚಾಸಾ 1 ಬಸವ್ವ ಊರ್ಫ ಬಸವೆಣ್ಣವ್ವ ಇವರನ್ನು ಠಾಣೆಗೆ ಕರೆಯಿಸಿ , ಇವರ ಹೇಳಿಕೆ ಪಡೆದಿರುತ್ತೇನೆ. ಚಾಸಾ 1 ರವರಿಗೆ ಸದರಿ ಸಬ್ ರಿಜಿಸ್ಟರ ಆಫೀಸನಿಂದ ತೆಗೆದು ಕೊಂಡ ದಾಖಲಾತಿಯನ್ನು ತೋರಿಸಿ , ಅದರಲ್ಲಿರುವ ಫೋಟೋವನ್ನು ನೋಡಿ , ಅದು ತನ್ನ ತಂಗಿ ರತ್ನವ್ವ ಕೋಂ. ವೀರಪ್ಪ ಅಕ್ಕಿ (ಎ-5) ಇವರುದಾಗಿದ್ದು, ಅದು ತನ್ನದು ಅಲ್ಲ ಎಂದು ನಮ್ಮ ಮುಂದೆ ಹೇಳಿಕೆ ಕೊಟ್ಟಿರುತ್ತಾಳೆ. ಅದೇ ರೀತಿ ಹಕ್ಕು ಪಡೆದುಕೊಂಡಂತಹ ವ್ಯಕ್ತಿಯನ್ನು ಆ ಫೋಟೋದಲ್ಲಿ ನೋಡಿ ಗುರುತಿಸಿ, ಅದು 1 ನೆ ಆರೋಪಿ ಗಂಗಾಧರ ಸಂಗಪ್ಪ ಅಂಗಡಿ ಇವರದಾಗಿದೆ ಎಂದು ಹೇಳಿರುತ್ತಾರೆ. ದಿಃ 08/01/2018 ರಂದು 1 ನೇ ಆರೋಪಿಗೆ ಕಲಂ 41 ಎ ಸಿ. ಆರ್. ಪಿ.ಸಿ. ಅಡಿಯಲ್ಲಿ ನೋಟಿಸು ಜಾರಿ ಮಾಡಿ , ಠಾಣೆಗೆ ಬರಮಾಡಿಕೊಂಡು , ವಿಚಾರಣೆ ಮಾಡಿ , ಅವರು ಕೊಟ್ಟ ಸ್ವ- ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತೇನೆ. ಸದರಿಯವರು ತಮ್ಮ ಸ್ವ-ಖುಷಿ ಹೇಳಿಕೆಯಲ್ಲಿ ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರ ಕ್ಕೆ ಸಾಕ್ಷಿದಾರರಾಗಿ 2 ನೇ ಆರೋಪಿ ವೀರಣ್ಣ ಸವಡಿ ಮತ್ತು 3 ನೇ ಆರೋಪಿ ಸುರೇಶ ಅಂಗಡಿ ಸಾಕ್ಷಿದಾರರಾಗಿ ಸಹಿ ಹಾಕಿದ್ದಾಗಿ ಹೇಳಿರುತ್ತಾರೆ. ವೀರಣ್ಣ ಮತ್ತು ಸುರೇಶ ಇವರು ತಾವುಗಳು ಸಾಕ್ಷಿದಾರರಾಗಿ ಸಹಿ ಮಾಡುವಾಗ ಬೇರೆಯವರ ಸಹಿ ಮಾಡಿದ್ದಾಗಿ ಹಾಗೂ ಅವರುಗಳು ಬಿ. ಜಿ. ಸವಡಿ ಮತ್ತು ಎಸ್.ಬಿ ಮುಧೋಳ ಎಂಬುವುದಾಗಿ ಸಹಿ ಮಾಡಿರುವುದಾಗಿ ಹೇಳಿರುತ್ತಾರೆ. ದಿಃ 20/01/2018 ರಂದು ಠಾಣೆಗೆ

ಆರೋಪಿತರಾದ ಗಂಗಾಧರ ಸಂಗಪ್ಪ ಅಂಗಡಿ , ವೀರಣ್ಣ ಗುರುಪಾದಪ್ಪ ಸವಡಿ ಮತ್ತು ಸುರೇಶ ಶಿವಮೂರ್ತೆಪ್ಪ ಅಂಗಡಿ ಮತ್ತು ರತ್ನವ್ವ ಕೋಂ. ವೀರಪ್ಪ ಅಕ್ಕಿ ಇವರನ್ನು ಕರೆಯಿಸಿ, ಕಲಂ 41 ಎ ಸಿ. ಆರ್. ಪಿ.ಸಿ. ಅಡಿಯಲ್ಲಿ ನೋಟಿಸು ಜಾರಿ ಮಾಡಿ ಠಾಣೆಗೆ ಕರೆಯಿಸಿ ಹಾಗೂ ಅದೇ ದಿನ ಚಾಸಾ 5 ಶಿವಶಂಕರ ನೂರಂದಪ್ಪ ಸಾಂಬ್ರಾಣಿ , ಉಪನೋಂದಾಣಿಧಿಕಾರಿ ಇವರನ್ನು ಠಾಣೆಗೆ ಕರೆಯಿಸಿ, ಚಾಸಾ 5 ಆರೋಪಿತರನ್ನು ನೋಡಿ ಆ ದಿನ ತಮ್ಮ ಉಪನೋಂದಾಣಾ ಕಚೇರಿಗೆ ಆರೋಪಿತರು ಬಂದು ಸುಳ್ಳು ಮಾಹಿತಿ ನೀಡಿ, ಸದರಿ ಆಸ್ತಿಗಳ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಬನಾವಟ್ ಮಾಡಿದ್ದಾಗಿ , ಹೇಳಿರುತ್ತಾರೆ. ಚಾಸಾ 5 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ರೋಣದ ಸಬ್ ರಿಜಿಸ್ಟರ ಆಫೀಸನಲ್ಲಿ ಕಂಪ್ಯೂಟರ್ ಆಪರೇಟರ್ ಆಗಿದ್ದ ಮಹಾಂತೇಶ ತಿಪ್ಪಣ್ಣ ಹೂಗಾರ ಇವರನ್ನು ಠಾಣೆಗೆ ಕರೆಯಿಸಿ , ಚಾಸಾ 6 ಆರೋಪಿತರನ್ನು ನೋಡಿ ಆ ದಿನ ತಮ್ಮ ಉಪನೋಂದಾಣಾ ಕಚೇರಿಗೆ ಆರೋಪಿತರು ಬಂದು ಸುಳ್ಳು ಮಾಹಿತಿ ನೀಡಿ, ಸದರಿ ಆಸ್ತಿಗಳ ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಬರೆಸಿಕೊಂಡಿದ್ದಾಗಿ ಹೇಳಿರುತ್ತಾರೆ. ಚಾಸಾ 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ 1 ರವರ ಮಗನಾದ ವೀರಪ್ಪ ತಂದೆ ಮಲ್ಲಪ್ಪ ಬನ್ನಿಗೋಳ ಇವರ ಹೇಳಿಕೆಯನ್ನು ಪಡೆದಿದ್ದು, ಸದರಿಯವರು ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ನೋಡಿ, ಅದರ ಪೋಟೋದಲ್ಲಿರುವ ವ್ಯಕ್ತಿ ತನ್ನ ಚಿಕ್ಕಮ್ಮ ರತ್ನಮ್ಮ ಕೋಂ. ವೀರಪ್ಪ ಅಕ್ಕಿ ಎಂದು ಗುರುತಿಸಿರುತ್ತಾರೆ. ಅದೇ ದಿನ ಚಾಸಾ 1 ರವರ ಪುನರ ಹೇಳಿಕೆಯನ್ನು ಪಡೆದಿರುತ್ತೇನೆ. ಚಾಸಾ 1 ರವರು ತಮ್ಮ ಪುನರ ಹೇಳಿಕೆಯಲ್ಲಿ

ಸಾಕ್ಷಿದಾರರಾಗಿ ಸಹಿ ಮಾಡಿದ ವೀರಣ್ಣ ಗುರುಪಾದಪ್ಪ ಸವಡಿ ಹಾಗೂ ಸುರೇಶ ಶಿವಮೂರ್ತೆಪ್ಪ ಸವಡಿ ಇವರು ತಮ್ಮ ತಂಗಿಯ ಮಕ್ಕಳು ಎಂದು ಹೇಳಿರುತ್ತಾರೆ. ದಿಃ 21/01/2018 ರಂದು ವೀರಣ್ಣ ಮಲ್ಲಪ್ಪ ಬನ್ನಿಗೋಳ ಇವರ ಪುನರ ಹೇಳಿಕೆ ಪಡೆದಿರುತ್ತೇನೆ. ಸಬ್ ರಿಜಿಸ್ಟರ ರವನ್ನು ವಿಚಾರ ಮಾಡಿದಾಗ , ಸದರಿಯವರು 4 ನೇ ಆರೋಪಿ ಚಾಸಾ 1 ರವರ ಮತದಾರರ ಗುರುತಿನ ಚೀಟಿ ತಂದಿದ್ದು, ಅದರಲ್ಲಿರುವ ಪೋಟೋ ತುಂಬಾ ಹಳೆಯದು ಮತ್ತು ಸ್ಪಷ್ಟವಾಗಿ ಇರದ ಕಾರಣ 4 ನೇ ಆರೋಪಿಯೇ ಚಾಸಾ 1 ಎಂದು ತಿಳಿದು ಹಾಗೂ ಸಾಕ್ಷಿದಾರರಾದ 2 ಮತ್ತು 3 ನೇ ಆರೋಪಿತರು ತಮಗೆ 4 ನೇ ಆರೋಪಿ ಎಂದು ತೋರಿಸಿ , ಇವರೇ ಚಾಸಾ 1 ಎಂದು ಗುರುತಿಸಿದ ಮೇರೆಗೆ ಪತ್ರವನ್ನು ರಿಜಿಸ್ಟರ ಮಾಡಿದ್ದಾಗಿ ಹೇಳಿರುತ್ತಾರೆ. ದಿಃ 10/02/2018 ರಂದು ಸದರಿ ಜಮೀನಿಗೆ ಸಂಬಂಧಪಟ್ಟಂತಹ ಉತಾರವನ್ನು ತಹಶೀಲ್ದಾರವರಿಂದ ಪಡೆದುಕೊಂಡಿರುತ್ತೇನೆ. ದಿಃ 10/02/2018 ರಂದು ಆರೋಪಿತರ ವಿರುದ್ಧ ಆರೋಪಿ ಸಾಬೀತು ಆಗಿದ್ದರಿಂದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ಅಪರಾಧ 7 ವರ್ಷಕ್ಕಿಂತ ಕಡಿಮೆ ಶಿಕ್ಷೆ ಇದಿದ್ದರಿಂದ ಆರೋಪಿತರನ್ನು ದಸ್ತಗಿರಿ ಮಾಡಿರಲಿಲ್ಲ. ಆರೋಪಿತರಾದ ಗಂಗಾಧರ , ವೀರಣ್ಣ, ಸುರೇಶ , ಮತ್ತು ರತ್ನವ್ವ ಇವರ ಸ್ವ-ಖುಷಿ ಹೇಳಿಕೆ ನೋಡುತ್ತಿದ್ದೇನೆ. ಅವುಗಳಲ್ಲಿ ನನ್ನ ಸಹಿ ಇರುತ್ತದೆ. ಸದರಿಯವರ ಸ್ವ-ಖುಷಿ ಹೇಳಿಕೆಯನ್ನು ಕ್ರಮವಾಗಿ ನಿಪಿಃ 7 ರಿಂದ 10 ಎಂದು , ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 7 ಎ ರಿಂದ 10 ಎ ಎಂದು ಗುರುತಿಸಲಾಯಿತು. ಸಬ್ ರಿಜಿಸ್ಟರ

ರೋಣ ನನಗೆ ಬರೆದ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿಃ 11 ಎಂದು ಗುರುತಿಸಲಾಯಿತು. ಹಾಗೂ ಹೆಬ್ಬಟ್ಟಿನ ಮುದ್ರೆಯ ರಿಜಿಸ್ಟರನ್ನು ನಿಪಿಃ 12 ಎಂದು ಗುರುತಿಸಲಾಯಿತು. ಸಬ್ ರಿಜಿಸ್ಟರವರು ಆರೋಪಿತರು ನೋಂದಣಿ ಕಾಲಕ್ಕೆ ಕೊಟ್ಟಂತಹ ಆರೋಪಿತರ ಗುರುತಿನ ಚೀಟಿಯನ್ನು ನಮಗೆ ಕೊಟ್ಟಿದ್ದು, ಅವುಗಳನ್ನು ಈಗ ನೋಡುತ್ತಿದ್ದೇನೆ. 1 ನೇ ಆರೋಪಿಗೆ ಸಂಬಂಧಪಟ್ಟಂತಹ ರೇಷನ ಕಾರ್ಡನ್ನು ಈಗ ನೋಡುತ್ತಿದ್ದು , ಅದನ್ನು ನಿಪಿಃ 13 ಎಂದು ಗುರುತಿಸಲಾಯಿತು. 4 ನೇ ಆರೋಪಿ ನೊಂದಣಿ ಕಾಲಕ್ಕೆ ಕೊಟ್ಟಂತಹ ಮತದಾರರ ಪಟ್ಟಿಯನ್ನು ಸಬ್ ರಿಜಿಸ್ಟರ ನಮಗೆ ನೀಡಿದ್ದು, ಅದನ್ನು ನಿಪಿಃ 14 ಎಂದು ಗುರುತಿಸಲಾಯಿತು. ನಾನು ತನಿಖೆ ಕಾಲದಲ್ಲಿ ಆರೋಪಿತರಿಂದ 1 ರಿಂದ 3 ನೇ ಆರೋಪಿತರ ಆಧಾರ ಕಾರ್ಡನ ಜರಾಕ್ಸ ಪ್ರತಿಯನ್ನು ಪಡೆದಿದ್ದು, ಅದನ್ನು ಕ್ರಮವಾಗಿ ನಿಪಿಃ 15 ರಿಂದ 17 ಎಂದು ಗುರುತಿಸಲಾಯಿತು. ನಾನು ರೋಣ ತಾಲೂಕ ಕಚೇರಿಯಿಂದ ಪಡೆದಂತಹ ಚಾಸಾ 1 ರವರ ಆಸ್ತಿಗೆ ಸಂಬಂಧಪಟ್ಟಂತಹ ಆರ್. ಟಿ. ಸಿ ಎಕ್ಸಟ್ರ್ಯಾಕ್ಟಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿಃ 18 ರಿಂದ 26 ಎಂದು ಗುರುತಿಸಲಾಯಿತು. ನಮ್ಮ ತನಿಖೆಯಿಂದ ಕಂಡು ಬಂದಿದ್ದು, ಈ ರೀತಿ ಇರುತ್ತದೆ. ಚಾಸಾ 1 ಮತ್ತು 1 ನೇ ಆರೋಪಿ ಖಾಸಾ ಅಕ್ಕ ಮತ್ತು ತಮ್ಮ ಆಗಿದ್ದು, 4 ನೇ ಆರೋಪಿ ಚಾಸಾ 1 ರವರ ಖಾಸಾ ತಂಗಿ ಯಾಗಿದ್ದು , ಚಾಸಾ 1 ಮತ್ತು 4 ನೇ ಆರೋಪಿ ಹೋಲಿಕೆಯಲ್ಲಿ ಒಂದೇ ಇದಿದ್ದರಿಂದ , ಚಾಸಾ 1 ರವರಿಗೆ ಸೇರಿದ ಹಕ್ಕನ್ನು 1 ನೇ ಆರೋಪಿ ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ 4 ನೇ ಆರೋಪಿ ಯನ್ನು

ಕರೆದುಕೊಂಡು ಹೋಗಿ, ತಮ್ಮ ಸಂಬಂಧಿಕರಾದ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿದಾರರನ್ನಾಗಿ ಕರೆದುಕೊಂಡು ಚಾಸಾ 1 ರವರೇ ಒಂದು ಹಕ್ಕು ಬಿಟ್ಟು ಕೊಟ್ಟಂತಹ ಪತ್ರವನ್ನು ಬರೆದುಕೊಟ್ಟಿರುವ ರೀತಿಯಲ್ಲಿ ಸೃಷ್ಟಿಸಿ ಚಾಸಾ 1 ರವರಿಗೆ ಮೋಸ ಮಾಡಬೇಕು ಎಂಬ ಉದ್ದೇಶದಿಂದ ಈ ರೀತಿ ಮಾಡಿದ್ದಾಗಿ ಕಂಡು ಬಂದಿರುತ್ತದೆ. ನನಗೆ ನಿಪಿಃ 1 ಪತ್ರ ನೋಡುತ್ತಿದ್ದು , ಸದರಿ ಪತ್ರವನ್ನು 1 ರಿಂದ 4 ನೇ ಆರೋಪಿತರು ಕೂಡಿಕೊಂಡು ಸೃಷ್ಟಿಸಿದ ಪತ್ರ ಆಗಿರುತ್ತದೆ. ನಮ್ಮ ತನಿಖೆಯಿಂದ ಆರೋಪಿತರು ತಪ್ಪು ಮಾಡಿದ್ದಾಗಿ ಕಂಡು ಬಂದಿರುತ್ತದೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿ, ನಾನು ಆ ದಿನ ಇವರನ್ನು ವಿಚಾರಣೆ ಮಾಡಿ , ಇವರ ಸ್ವ- ಖುಷಿ ಹೇಳಿಕೆಯನ್ನು ಪಡೆದಿದ್ದಾಗಿ ಹೇಳಿರುತ್ತಾರೆ. ಉಳಿದ ಆರೋಪಿತರು ಗೈರು ಹಾಜರಾಗಿದ್ದು, ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಅರ್ಜಿ ಹಾಕಿರುತ್ತಾರೆ.

**ಪಾಟೀ ಸವಾಲುಃ - ಆರೋಪಿ ಪರ ವಕೀಲರು ಸಮಯ ಕೇಳಿದ್ದು, ನೀಡಲಾಯಿತ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ**